ರಿ.ನಂ. ಆರ್.ಸಿ.ಎಸ್.1540 ಸ್ಥಾಪನೆ : 08-11-1939 GSTIN : 29AAAJM0788P1ZD

ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ-577 204 (ಕರ್ನಾಟಕ)

The Malnad Areca Marketing Co-Operative Society Ltd.

A.P.M.C. Yard, Sagara Road, Shivamogga-577 204 (Karnataka)

08182-250513/14, 250881 ho@mamcos.info www.mamcos.info

building.homamcos@gmail.com

**ಮಾಮ್‌ಕೋಸ್/ಕೇ.ಕ/ಕಟ್ಟಡ/8 / 2025-26/1473** **ದಿನಾಂಕ: 29.12.2025**

**ಟೆಂಡರ್ ಪ್ರಕಟಣೆ**

ಈ ಕಾಮಗಾರಿಯನ್ನು ತರೀಕೆರೆ ಎ.ಪಿ.ಎಂ.ಸಿ ಆವರಣದಲ್ಲಿರುವ ಸಂಘದ ಶಾಖಾ ಕಛೇರಿಯ ಒಳಾಂಗಣ ಕಾಮಗಾರಿಗೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ನಿಗದಿತ ನಮೂನೆಯಲ್ಲಿ ಮೊಹರಾದ ಮುಚ್ಚಿದ ಲಕೋಟೆಯ ಮೇಲೆ ಕಾಮಗಾರಿಯ ಹೆಸರನ್ನು ಬರೆದಿರುವ ಐಟಂ ದರದ ಟೆಂಡರ್‌ನ್ನು ದ್ವಿಪತ್ರಿಗಳಲ್ಲಿ ಸ್ವೀಕರಿಸಲಾಗುವುದು.

- ಟೆಂಡರ್ ಅನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಸಂಘವು ಹೊಂದಿರುತ್ತದೆ.
- ಟೆಂಡರ್ ಫಾರಂಗೆ ಅರ್ಜಿಯನ್ನು ನೀಡುವುದು ಹಾಗೂ ಅರ್ಜಿಯನ್ನು ಸ್ವೀಕರಿಸುವುದು ಸಂಘದ ಕೇಂದ್ರ ಕಛೇರಿಯಲ್ಲಿ ಮಾತ್ರ ನಿರ್ವಹಿಸಲಾಗುವುದು.
- ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಕೇಂದ್ರ ಕಛೇರಿಯಲ್ಲಿ ಮಾತ್ರ ಸ್ವೀಕರಿಸಲಾಗುವುದು.
- ಟೆಂಡರ್ ಫಾರಂ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

- ನಿಗದಿಪಡಿಸಿದ ಇ.ಎಂ.ಡಿ ಮೊತ್ತವನ್ನು MAMCOS LTD SHIVAMOGGA ಹೆಸರಿನಲ್ಲಿ ಡಿ.ಡಿ ಮೂಲಕ/ಯೂನಿಯನ್ ಬ್ಯಾಂಕ್, ಬಿ.ಹೆಚ್ ರಸ್ತೆ ಶಿವಮೊಗ್ಗ ಶಾಖೆಯಲ್ಲಿರುವ ಸಂಘದ ಉಳಿತಾಯ ಖಾತೆ ನಂ.520101215254046 IFSC CODE: UBIN0900061 ಕ್ಕೆ ಪಾವತಿ ಮಾಡತಕ್ಕದ್ದು,
- ಸಂಘದ ಕೇಂದ್ರ ಕಛೇರಿಯ ಕಟ್ಟಡ ವಿಭಾಗಕ್ಕೆ ಕೆಲಸದ ವೇಳೆಯಲ್ಲಿ ಭೇಟಿ ನೀಡಿ ನಿಬಂಧನೆಗಳು ಹಾಗೂ ಇತರೆ ವಿವರಗಳನ್ನು ಪಡೆಯಬಹುದಾಗಿದೆ.

| ಕ್ರ. ಸಂ | ಕಾಮಗಾರಿಯ ವಿವರಗಳು | ಅಂದಾಜು ವೆಚ್ಚ ಮತ್ತು ವಿಸ್ತೀರ್ಣ | ಇ.ಎಂ.ಡಿ ಮೊತ್ತ (ರೂಗಳಲ್ಲಿ) | ಗುತ್ತಿಗೆದಾರರು | ಟೆಂಡರ್ ಫಾರಂ ಮೊತ್ತ (ರೂ.ಗಳಲ್ಲಿ) + ಜಿ.ಎಸ್.ಟಿ | ಕಾಮಗಾರಿಗಳನ್ನು ಮುಗಿಸಲು ನಿಗದಿಪಡಿಸಿದ ಕಾಲಾವಧಿ | ಟೆಂಡರ್ ಫಾರಂಗಳಿಗೆ ಅರ್ಜಿಯನ್ನು ಸ್ವೀಕರಿಸುವ ದಿನಾಂಕ ಸಂಜೆ 4.00 ವರೆಗೆ | ಖಾಲಿ ಟೆಂಡರ್ ಫಾರಂ ಕೊಡುವ ಕೊನೆಯ ದಿನಾಂಕ ಸಂಜೆ 4.00 ರವರೆಗೆ | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಸಂಜೆ 4.00 ರವರೆಗೆ |
|---|---|---|---|---|---|---|---|---|---|
| 1 | ಶಾಖಾ ಕಛೇರಿಯ ಒಳಾಂಗಣ ಕಾಮಗಾರಿ | 17,60,117/- | 44,000/- | ಒಳಾಂಗಣ ಕಾಮಗಾರಿ ಗುತ್ತಿಗೆದಾರರು | 500.00<br>90.00<br>590.00 | 45 ದಿವಸಗಳು | 07.01.2026 | 07.01.2026 | 08.01.2026 |

ಸಹಿ/-

ವ್ಯವಸ್ಥಾಪಕ ನಿರ್ದೇಶಕರು
ಮಾಮ್‌ಕೋಸ್ ನಿ., ಶಿವಮೊಗ್ಗ

ರಿ.ನಂ. ಆರ್.ಸಿ.ಎಸ್.1540 ಸ್ಥಾಪನೆ : 08-11-1939 GSTIN : 29AAAJM0788P1ZD

**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ**

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ, ಶಿವಮೊಗ್ಗ-577 204 (ಕರ್ನಾಟಕ)

**The Malnad Areca Marketing Co-Operative Society Ltd.**

A.P.M.C. Yard, Sagara Road, Shivamogga-577 204 (Karnataka)

08182-250513/14, 250881 ho@mamcos.info www.mamcos.info

**ಮಾಮ್‌ಕೋಸ್/ಕೇ.ಕ/ಕಟ್ಟಡ/ 8 / 2025-26/1473** **ದಿನಾಂಕ ; 29/12/2025**

**ತರೀಕೆರೆ ಎ.ಪಿ.ಎಂ.ಸಿ ಆವರಣದಲ್ಲಿರುವ ಸಂಘದ ಶಾಖಾ ಕಛೇರಿಯ ಒಳಾಂಗಣ ವಿನ್ಯಾಸ ಕಾಮಗಾರಿಗೆ ಸಂಬಂಧಪಟ್ಟ ನಿಬಂಧನೆಗಳು**

1. ಅರ್ಜಿದಾರರು ಟೆಂಡರ್ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರತಕ್ಕದ್ದು.

2. ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ ದಾರರುಗಳ ಪೈಕಿ ಯಶಸ್ವಿ ಬಿಡ್ ದಾರರು ಬಿಡ್ ಮಾಡಿದ/ಒಪ್ಪಿಕೊಂಡ ಅಂತಿಮ ಮೊತ್ತಕ್ಕೆ ನಿಯಮಾನುಸಾರ ಛಾಪಕಾಗದದಲ್ಲಿ ಒಪ್ಪಂದ ಕರಾರು ಪತ್ರವನ್ನು ಮಾಡಿಕೊಳ್ಳತಕ್ಕದ್ದು. ಛಾಪಕಾಗದದ ಮೊತ್ತವನ್ನು ಯಶಸ್ವಿ ಬಿಡ್ದಾರರು ಭರಿಸತಕ್ಕದ್ದು

3. ತರೀಕೆರೆ ಎ.ಪಿ.ಎಂ.ಸಿ ಆವರಣದಲ್ಲಿರುವ ಸಂಘದ ಶಾಖಾ ಕಛೇರಿಯ ಒಳಾಂಗಣ ವಿನ್ಯಾಸ, ಕಾಮಗಾರಿಯನ್ನು ನಿರ್ವಹಿಸುವುದು ಹಾಗೂ ಯಾವುದೇ ಸಾಗಾಣಿಕೆ ವೆಚ್ಚ / ಪ್ರಯಾಣದ ಭತ್ಯೆಗಳಾಗಲಿ ಮತ್ತು ಇತರೆ ಹೆಚ್ಚುವರಿ ಮಜೂರಿಯಾಗಲಿ ಸಂಘದಿಂದ ಪಾವತಿಸುವುದಿಲ್ಲ. ಹಾಗೂ ಕಾಮಗಾರಿಗೆ ಅಗತ್ಯ ಇರುವ ವಿದ್ಯುತ್ ಸಂಪರ್ಕವನ್ನು ನೀಡಲಾಗುವುದಿಲ್ಲ. ಆದರೆ ಗುತ್ತಿಗೆದಾರರೇ ಈ ಕಾಮಗಾರಿಗೆ ಅಗತ್ಯವಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಮೇಸ್ಕಾಂ ಕಛೇರಿಯಿಂದ ಮಂಜೂರು ಮಾಡಿಸಿಕೊಳ್ಳತಕ್ಕದ್ದು.

4. ಗುತ್ತಿಗೆದಾರರು ಈ ಹಿಂದೆ ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇರುವ ಬಗ್ಗೆ ಹಾಗೂ ಸಕಾರಣವಿಲ್ಲದೆ ಯಾವುದೇ ಕಾಮಗಾರಿಗಳನ್ನು ವಿಳಂಬವಾಗಿ ಪೂರ್ಣಗೊಳಿಸಿರದ ಬಗ್ಗೆ ಸ್ವಯಂ ದೃಢೀಕರಣ ಸಲ್ಲಿಸತಕ್ಕದ್ದು.

5. ಟೆಂಡರ್‌ನಲ್ಲಿ ನಮೂದಿಸಿರುವ (ಟೆಂಡರ್ ಫಾರಂನಲ್ಲಿ ನಮೂದಿಸಿದಂತೆ) ಕಾಮಗಾರಿ ಹೊರತುಪಡಿಸಿ, ಹೆಚ್ಚುವರಿ ಬೇರೆ ಕಾಮಗಾರಿಯನ್ನು ಸಂಘದ ಅನುಮತಿಯಿಲ್ಲದೆ ಮಾಡಿದ ಪಕ್ಷದಲ್ಲಿ ಸಂಘವು ಜವಾಬ್ದಾರರಲ್ಲ. ಹಾಗೆಯೇ ಹೆಚ್ಚುವರಿ ಕಾಮಗಾರಿ ಆವಶ್ಯಕತೆ ಇದ್ದ ಪಕ್ಷದಲ್ಲಿ ಸಂಘದ ಕೇಂದ್ರ ಕಛೇರಿಯಿಂದ ಅನುಮತಿಯನ್ನು ಪಡೆಯತಕ್ಕದ್ದು.

6. ಈ ಕಾಮಗಾರಿಯನ್ನು ಪ್ರಾರಂಭ ಮಾಡುವ ಮುನ್ನ ಯಾವುದೇ ಮುಂಗಡ ಮೊತ್ತವನ್ನು ಪಾವತಿಸಲಾಗುವುದಿಲ್ಲ. ಕಾಮಗಾರಿ ಪೂರ್ಣಗೊಂಡ ನಂತರ ಸಂಘದ ತಾಂತ್ರಿಕ ಸಲಹೆಗಾರರು ಕಾಮಗಾರಿಯನ್ನು ಪರಿಶೀಲಿಸಿ, ದೃಢೀಕರಿಸಿದ ಬಿಲ್ ಬಾಬ್ತು ಪಾವತಿಸಲಾಗುವುದು.( ಟಿ.ಡಿ.ಎಸ್ ಸೇರಿದಂತೆ ಸರ್ಕಾರ ನಿಗದಿಪಡಿಸುವ ಇನ್ನಿತರೇ ಯಾವುದೇ ತೆರಿಗೆ ಅನ್ವಯವಾದಲ್ಲಿ ಅದನ್ನು ಕಟಾಯಿಸಲಾಗುವುದು.)

7. ಕಾಮಗಾರಿ ಮುಗಿದ ಬಳಿಕ ಹನ್ನೆರಡು ತಿಂಗಳ ಕಾಮಗಾರಿಯ ನಿರ್ವಹಣಾ ಅವಧಿಯಲ್ಲಿ ಏನಾದರು ದೋಷ ಕಂಡುಬಂದಲ್ಲಿ ಅದನ್ನು ನಿಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡತಕ್ಕದ್ದು ಅಥವಾ ದುರಸ್ತಿ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದಲ್ಲಿ ಅದನ್ನು ಹೊಸದಾಗಿ ಅಳವಡಿಸುವುದು ಹಾಗೂ ವಾರಂಟಿ & ಗ್ಯಾರಂಟಿಗಳ ಬಗೆಗೆ ದೃಢೀಕೃತ ಪತ್ರವನ್ನು ನೀಡತಕ್ಕದ್ದು,

8. ಟೆಂಡರ್ ಹಾಕಬಯಸುವ ಗುತ್ತಿಗೆದಾರರು ಈ ಕಾಮಗಾರಿಗೆ ಅವಶ್ಯವಿರುವ ಎಲ್ಲಾ ಯಂತ್ರೋಪಕರಣ ಮತ್ತು ಸಲಕರಣೆಗಳನ್ನು ಹೊಂದಿರತಕ್ಕದ್ದು, (ಸಲಕರಣೆಗಳಿಗೆ ಸಂಘದಿಂದ ಯಾವುದೇ ಬಾಡಿಗೆ ನೀಡುವುದಿಲ್ಲ).

9. ಗುತ್ತಿಗೆದಾರರ ಮೂರು ವರ್ಷದ ವಹಿವಾಟಿನ ದೃಢೀಕೃತ ವಿವರಗಳನ್ನು ಸಲ್ಲಿಸುವುದು. ಹಾಗೆಯೇ ಹಿಂದಿನ ಒಂದು ವರ್ಷದ ವಾರ್ಷಿಕ ವಹಿವಾಟು ಕನಿಷ್ಠ ಅಂದರೆ ಒಳಾಂಗಣ ವಿನ್ಯಾಸ ಕಾಮಗಾರಿಗೆ ರೂ.18 ಲಕ್ಷ, ಮೊತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಹಾಗೆಯೇ, ಕಾಮಗಾರಿ ನಿರ್ವಹಿಸಿರುವುದಕ್ಕೆ ಕಾಮಗಾರಿ ದೃಢೀಕರಣ ಪತ್ರವನ್ನು ಲಗತ್ತಿಸುವುದು.

10. ಈ ಕಾಮಗಾರಿಯು ಪ್ರಗತಿಯಲ್ಲಿರುವ ಸಮಯದಲ್ಲಿ ಸಂಘದ ತಾಂತ್ರಿಕ ಸಲಹೆಗಾರರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಭೇಟಿ ನೀಡಿದಾಗ ಕಾಮಗಾರಿಯ ಬಗೆಗೆ ನಿರ್ದೇಶನ ನೀಡಿದಲ್ಲಿ ಆ ಕಾಮಗಾರಿಯನ್ನು ನಿರ್ವಹಿಸತಕ್ಕದ್ದು ಮತ್ತು ಟೆಂಡರ್ ಫಾರಂಅಲ್ಲಿ ಸೂಚಿಸಿರುವ ಗುಣಮಟ್ಟ ಮತ್ತು ಪರಿಮಾಣಗಳು ವ್ಯತ್ಯಾಸವಾಗಿರುವ ಬಗೆಗೆ ಇವರು ಪರಿಶೀಲಿಸಿ ಅಗತ್ಯವಾದಲ್ಲಿ/ಬದಲಾವಣೆಯ ಅಗತ್ಯಕ್ಕೆ ತಕ್ಕಂತೆ ದುರಸ್ತಿ ಮಾಡತಕ್ಕದ್ದು, ಈ ರೀತಿ ಆದಂತಹ ವ್ಯತ್ಯಾಸಕ್ಕೆ ಹೆಚ್ಚುವರಿ ಮೊಬಲಗನ್ನು ಪಾವತಿಸಲಾಗುವುದಿಲ್ಲ.

11. ಈ ಕಾಮಗಾರಿಯ ನಿರ್ವಹಣೆಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ ಶಾಖಾ ಕಛೇರಿಯ ಒಳಾಂಗಣ ವಿನ್ಯಾಸ ಕಾಮಗಾರಿಗೆ 45 ದಿನಗಳ ಅವಧಿಯಲ್ಲಿ ಸಂಪೂರ್ಣ ಮುಗಿಸತಕ್ಕದ್ದು, ಹಾಗೆಯೇ ಈ ಕಾಮಗಾರಿಯು ಸಂಪೂರ್ಣ ಮುಗಿಸಲು ಸಕಾರಣವಿಲ್ಲದೆ ವಿಳಂಬವಾದ ಪಕ್ಷದಲ್ಲಿ ನಿಮಗೆ ಪಾವತಿಸುವ ಬಿಲ್‌ನ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಸಂಘದ ಆಡಳಿತ ಮಂಡಲಿಗೆ ಇರುತ್ತದೆ.

12. ಈ ಕಾಮಗಾರಿಯು ನಿರ್ವಹಿಸುವ ಅವಧಿಯಲ್ಲಿ ಯಾವುದೇ ಅನಾಹುತವಾದಲ್ಲಿ ಟೆಂಡರ್‌ದಾರರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ಸಂಘಕ್ಕೆ ಯಾವುದೇ ಹೊಣೆಗಾರಿಕೆ ಇರುವುದಿಲ್ಲ.

13. ಈ ಕಾಮಗಾರಿಯ ಟೆಂಡರ್ ಕುರಿತಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೇಂದ್ರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು. ಹಾಗೂ ಟೆಂಡರ್ ಹಾಕುವ ಸಮಯ ಸಾರ್ವಜನಿಕ ರಜಾ ದಿನವಾದಲ್ಲಿ ಮರುದಿನ ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

14. ಅರ್ಜಿದಾರರು ಜಿ.ಎಸ್.ಟಿ. ಪ್ರಮಾಣ ಪತ್ರದ ದೃಢೀಕೃತ ನಕಲು ಪ್ರತಿ ಸಲ್ಲಿಸುವುದು. ಹಾಗೂ ಈ ಟೆಂಡರ್ ಬಾಬು ಜಿ.ಎಸ್.ಟಿ.ಯನ್ನು ಒಳಗೊಂಡು ಟೆಂಡರ್ ಫಾರಂಗಳಲ್ಲಿ ನಮೂದಿಸುವುದು. ಪಾನ್ ಕಾರ್ಡ್, ಆಧಾರ್ ಕಾರ್ಡ್ ದೃಢೀಕೃತ ನಕಲು ಮತ್ತು ಬ್ಯಾಂಕ್ ಖಾತೆ ವಿವರಗಳ ದಾಖಲೆಗಳನ್ನು ಸಲ್ಲಿಸುವುದು.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು

ಮಾಮ್‌ಕೋಸ್ ನಿ., ಶಿವಮೊಗ್ಗ